ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

# ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ
# ಬದನವಾಳು

ಪ್ರಧಾನ ಸಂಪಾದಕರು
**ಡಾ. ಬಿ. ವಿ. ವಸಂತಕುಮಾರ್**

ಸಂಪಾದಕರು
**ಡಾ. ಎಸ್. ಜಿ. ರಾಮದಾಸ ರೆಡ್ಡಿ**

ಲೇಖಕರು
**ಡಾ. ಇಂದಿರಾ ಬಿ. ಪಿ.**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**BADANAVALU:** An Introduction Book on Places in Karnataka that Played a Major Role in the Freedom Struggle, Written by Dr. Indira B.P., Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
೧. ಡಾ. ಎಸ್. ಜಿ. ರಾಮದಾಸ ರೆಡ್ಡಿ
೨. ಡಾ. ಮೃತ್ಯುಂಜಯ ರುಮಾಲೆ
೩. ಶ್ರೀ ನರೇಂದ್ರಕುಮಾರ್ ಎಸ್.ಎಸ್.
೪. ಡಾ. ಪ್ರಕಾಶ ಗ. ಖಾಡೆ
೫. ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಣ : ೨೦೨೨
ಪ್ರತಿಗಳು : ೧೦೦೦
ಬೆಲೆ : ರೂ. ೩೦/-
ಪುಟ : ೪೦

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಫಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು.



ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಪ್ರಗತಿಯತ್ತ ಹೆಜ್ಜೆಯಿಡುತ್ತಿರುವ ನಮ್ಮ ಭಾರತ ದೇಶಕ್ಕೆ ೭೫ ವರ್ಷಗಳ ಸ್ವಾತಂತ್ರ್ಯ ಸಂಭ್ರಮ. ಕೇಂದ್ರ ಸರ್ಕಾರವು 'ಆಜ಼ಾದಿ ಕಾ ಅಮೃತ ಮಹೋತ್ಸವ' ಕಾರ್ಯಕ್ರಮವನ್ನು ವಿಶಿಷ್ಟವಾಗಿ ನಡೆಸುತ್ತಿದೆ. ನಮ್ಮ ಕರ್ನಾಟಕದಲ್ಲಿಯೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಈ ಅಮೃತ ಮಹೋತ್ಸವದ ಸಂಭ್ರಮದಲ್ಲಿ ೭೫ ಕಿರು ಹೊತ್ತಿಗೆಗಳನ್ನು ತರುವ ಹೆಮ್ಮೆಯ ಕಾರ್ಯವನ್ನು ಕೈಗೊಂಡಿದೆ. ಐತಿಹಾಸಿಕವಾಗಿ ಸ್ವಾತಂತ್ರ್ಯ ಚಳವಳಿಯ ಕಾಲದ ೭೫ ಪ್ರಮುಖ ಸ್ಥಳಗಳನ್ನು ಗುರುತಿಸಿ ಅವುಗಳ ಪ್ರಾಮುಖ್ಯತೆಯ ಬಗ್ಗೆ ಶಾಶ್ವತವಾಗಿ ಪುಸ್ತಕ ರೂಪದಲ್ಲಿ ದಾಖಲಿಸುತ್ತಿರುವುದು ಅತ್ಯಂತ ಶ್ಲಾಘನೀಯ ಅಂಶವಾಗಿದೆ. ಇದಕ್ಕಾಗಿ ಮೊದಲಿಗೆ ಕನ್ನಡ ಸಾಹಿತ್ಯ ಅಕೆಡೆಮಿಯನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಕಿರುಹೊತ್ತಿಗೆಗಳನ್ನು ಹೊರತರಲು ಸಂಪಾದನಾ ಕಾರ್ಯದ ಜವಾಬ್ದಾರಿಯನ್ನು ನಮ್ಮ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ಎಸ್. ಜಿ. ರಾಮದಾಸರೆಡ್ಡಿಯವರು ವಹಿಸಿಕೊಂಡಿರುವುದು ಅತ್ಯಂತ ಸಂತಸದ ವಿಷಯವಾಗಿದೆ. ಡಾ. ಎಸ್. ಜಿ. ರಾಮದಾಸರೆಡ್ಡಿ ನನಗೆ ಯಾವುದಾದರೂ ಎರಡು ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಬರೆಯಲು ಕೇಳಿದರು. ನಾನು ಸುಬ್ಬರಾಯನ ಕೆರೆ ಹಾಗೂ ಬದನವಾಳು ಸ್ಥಳಗಳನ್ನು ಆಯ್ಕೆ ಮಾಡಿಕೊಂಡೆ. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ನಮ್ಮ ತಂದೆ ದಿ. ಬಿ. ಆರ್. ಪ್ರಾಣೇಶರಾಯರು ತಮ್ಮ ನೆನಪುಗಳನ್ನು ಹಂಚಿಕೊಳ್ಳುವ ಸಂದರ್ಭದಲ್ಲಿ ಅನೇಕ ಬಾರಿ ಸುಬ್ಬರಾಯನ ಕೆರೆಯ ಬಗ್ಗೆ ಪ್ರಸ್ತಾಪಿಸುತ್ತಿದ್ದರು. ಆ ಒಂದು ನೆನಪಿನ ನಂಟು ಸುಬ್ಬರಾಯನ ಕೆರೆಯ ಬಗ್ಗೆ ಬರೆಯಲು ನನಗೆ ಸ್ಫೂರ್ತಿ ನೀಡಿತು. ಬದನವಾಳು ಖಾದಿ ಗ್ರಾಮೋದ್ಯೋಗದ ಬಗ್ಗೆ ನಾನು ಯುಜಿಸಿ ಮೈನರ್ ರಿಸರ್ಚ್ ಪ್ರಾಜೆಕ್ಟ್ ಮಾಡಿದಾಗ ಅಲ್ಲಿ ಕ್ಷೇತ್ರ ಕಾರ್ಯ ಮಾಡಿದ್ದೆನು. ಹಾಗಾಗಿ ಮತ್ತೊಂದು ಸ್ಥಳವಾಗಿ ಬದನವಾಳು ಆಯ್ಕೆ ಮಾಡಿಕೊಂಡೆನು. ಈ

ಐಕಾನಿಕ್ ಸ್ಥಳಗಳ ಬಗ್ಗೆ ಸಂಶೋಧನಾ ಕಿರು ಹೊತ್ತಿಗೆ ರಚಿಸಲು ಅನುವು ಮಾಡಿಕೊಟ್ಟ ಕನ್ನಡ ಸಾಹಿತ್ಯ ಅಕಾಡೆಮಿ ಹಾಗೂ ಸಂಪಾದಕರಾದ ಡಾ. ಎಸ್. ಜಿ. ರಾಮದಾಸರೆಡ್ಡಿಯವರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸುಬ್ಬರಾಯನಕೆರೆ ಹಾಗೂ ಬದನವಾಳು ಸ್ಥಳಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಅದರ ಬರವಣಿಗೆಯ ಸಂದರ್ಭದಲ್ಲಿ ಅಕಾಡೆಮಿಕ್ ಚರ್ಚೆ ನಡೆಸಿ ಅತ್ಯಮೂಲ್ಯ ಸಲಹೆಗಳನ್ನು ನೀಡಿದ ಹಿರಿಯ ಪತ್ರಕರ್ತರಾದ ಶ್ರೀಯುತ ಈಚನೂರು ಕುಮಾರ್ ಹಾಗೂ ಡಾ. ನರೇಂದ್ರ ಪ್ರಸಾದ್, ನಿವೃತ್ತ ಇತಿಹಾಸ ಪ್ರಾಧ್ಯಾಪಕರು, ಜೆ. ಎಸ್. ಎಸ್. ಮಹಿಳಾ ಕಾಲೇಜು, ಸರಸ್ವತಿಪುರಂ, ಮೈಸೂರು ಇವರಿಬ್ಬರಿಗೂ ಗೌರವಪೂರ್ಣ ನಮನಗಳು. ಮಾಹಿತಿಗಳನ್ನು ಸಂಗ್ರಹಿಸಲು ಮೈಸೂರಿನ ವಿಭಾಗೀಯ ಪತ್ರಾಗಾರ ಇಲಾಖೆಗೆ ಭೇಟಿ ನೀಡಿದಾಗ ಸಹಕಾರ ನೀಡಿದ ಸಹ ನಿರ್ದೇಶಕರಾದ ಡಾ. ಮಂಜುನಾಥ್ ಹಾಗೂ ವಿಭಾಗೀಯ ಪತ್ರಾಗಾರದ ಇಲಾಖೆಯಲ್ಲಿರುವ ಸಿಬ್ಬಂದಿ ವರ್ಗದವರಿಗೂ ವಂದನೆಗಳನ್ನು ಅರ್ಪಿಸುತ್ತೇನೆ.


ನಾನು ಬರೆದ ಬರಹಗಳನ್ನು ಅಚ್ಚುಕಟ್ಟಾಗಿ ಕನ್ನಡದಲ್ಲಿ ತಪ್ಪಿಲ್ಲದೆ ಬೆರಳಚ್ಚು ಮಾಡಿ ಸಕಾಲಕ್ಕೆ ನೀಡಿದ ಶ್ರೀಯುತ ನಿಧೀಶ್ ಕುಮಾರ್ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು. ನನ್ನ ಎಲ್ಲಾ ಅಕಾಡೆಮಿಕ್ ಕಾರ್ಯಗಳಿಗೂ ಬೆನ್ನೆಲುಬಾಗಿರುವ ನನ್ನ ಕುಟುಂಬಕ್ಕೂ ಅನಂತ ವಂದನೆಗಳು.

**ಡಾ. ಇಂದಿರಾ ಬಿ.ಪಿ.**
ಇತಿಹಾಸ ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಕುವೆಂಪುನಗರ, ಮೈಸೂರು.
ಮೊಬೈಲ್ ಸಂಖ್ಯೆ: ೮೯೫೧೦೪೧೧೧೩

## ಪರಿವಿಡಿ

ಶುಭ ಸಂದೇಶ ೩
ಶುಭ ಸಂದೇಶ ೫
ಪ್ರಧಾನ ಸಂಪಾದಕರ ಮಾತು ೭
ಲೇಖಕರ ಮಾತು ೧೧
ಬದನವಾಳು
(ಗಾಂಧೀ ನೆನಪಿನ ಖಾದಿ ಕೇಂದ್ರ) ೧೫
ಬದನವಾಳು – ಐತಿಹಾಸಿಕ ಹಿನ್ನೆಲೆ ೧೬
ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮ ೨೨
ಮಹಾತ್ಮ ಗಾಂಧೀಜಿಗೆ ಖಾದಿಯ ನೇಯ್ಗೆಯ ಅರಿವು ೨೩
ನಂದಿ ಬೆಟ್ಟದಲ್ಲಿ ಗಾಂಧೀಜಿ ೨೭
ಅರಮನೆಗಳ ನಗರ ಮೈಸೂರಿನಲ್ಲಿ ೨೭
ಬದನವಾಳು ಖಾದಿ ಕೇಂದ್ರದ ಸ್ಥಾಪನೆ ೩೦
ಈ ಕೆಳಗಿನ ಪಟ್ಟಿಯು ಬದನವಾಳಿನ ಖಾದಿ ನೂಲು ಹಾಗೂ ಮಾರಾಟದ ಬೆಳವಣಿಗೆ ಹಾಗೂ ಸರ್ಕಾರದ ಬೆಂಬಲದ ಅಂಶಗಳನ್ನು ವಿವರಿಸುತ್ತದೆ ೩೩
ಪರಾಮರ್ಶನ ಗ್ರಂಥಗಳು ೩೬
ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೩೭

## ಬದನವಾಳು
## (ಗಾಂಧೀ ನೆನಪಿನ ಖಾದಿ ಕೇಂದ್ರ)




ಮಹಾತ್ಮ ಗಾಂಧೀಜಿಯವರ ಪ್ರಕಾರ ಕೇವಲ ಗ್ರಾಮಗಳ ಉದ್ಧಾರದಿಂದ ಮಾತ್ರ ದೇಶದ ನಿಜವಾದ ಅಭಿವೃದ್ಧಿ ಸಾಧ್ಯ. ಹಳ್ಳಿಗಳು ನಾಶವಾದರೆ ಅದು ದೇಶದ ನಾಶವೂ ಹೌದು. ಶೋಷಣೆಯಿಂದ ಮುಕ್ತವಾದಾಗ ಮಾತ್ರ ಹಳ್ಳಿಗಳ ಪುನರುದ್ಧಾರ ಸಾಧ್ಯ. ಬೃಹತ್ ಕೈಗಾರೀಕರಣದಿಂದ ಉಂಟಾಗುವ ಸ್ಪರ್ಧೆ

ಮತ್ತು ಮಾರುಕಟ್ಟೆಯ ನೀತಿಯಿಂದಾಗಿ ಹಳ್ಳಿಗರ ಸಕ್ರಿಯ ಶೋಷಣೆ ಆರಂಭಗೊಳ್ಳುತ್ತದೆ. ಆದ್ದರಿಂದ ಹಳ್ಳಿಗಳು ಸ್ವಯಂ ಪೂರ್ಣವಾಗುವುದರ ಕಡೆಗೆ ಗಮನ ಹರಿಸಬೇಕು. ಗ್ರಾಮೋದ್ಯೋಗಗಳ ಅಭಿವೃದ್ಧಿಯಾಗಬೇಕು. ಒಟ್ಟಿನಲ್ಲಿ ಹಳ್ಳಿಗಳು ಶೋಷಣೆಯಿಂದ ಮುಕ್ತಗೊಳ್ಳಬೇಕಾದರೆ ಸ್ವಾವಲಂಬನೆ, ಸ್ವದೇಶಿ ತತ್ವಗಳೆ ಇದರ ಮಂತ್ರವಾಗಿದೆ. ಗಾಂಧೀಯುಗದ ಸ್ವಾತಂತ್ರ್ಯ ಹೋರಾಟದಲ್ಲಿ ರಚನಾತ್ಮಕ ಕಾರ್ಯಕ್ರಮ ಒಂದು ಪ್ರಮುಖ ಅಂಗವಾಗಿತ್ತು. ಖಾದಿ ಪ್ರಚಾರ ಸ್ವಾವಲಂಬನೆಯ ಪ್ರಮುಖ ಮಾರ್ಗವಾಗಿತ್ತು. ಗಾಂಧಿ ಕನಸಿನ ಖಾದಿ ಗ್ರಾಮೋದ್ಯೋಗ ಆರಂಭ ಗೊಂಡ ಗ್ರಾಮ ಬದನವಾಳು.

### ಬದನವಾಳು – ಐತಿಹಾಸಿಕ ಹಿನ್ನೆಲೆ



ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಒಂದು ಗ್ರಾಮವಾಗಿರುವ ಬದನವಾಳನ್ನು 'ನರಸಾಂಬುದಿ' ಎಂದು ಕರೆಯಲಾಗುತ್ತಿತ್ತು. ಈ ಗ್ರಾಮಕ್ಕೆ ಒಂದು ಪೌರಾಣಿಕ ಹಿನ್ನೆಲೆಯಿದೆ. ಭೈರವೇಶ್ವರ ದೇವರು ಒಮ್ಮೆ ಈ ಹಳ್ಳಿಗೆ ಆಗಮಿಸಿ ಬದನೆಕಾಯಿಯನ್ನು ಪ್ರತಿ ಮನೆಗೂ ಎಸೆದರೆಂದು, ಇದರಿಂದಾಗಿ ಈ ಹಳ್ಳಿಗೆ ಬದನವಾಳು ಎಂಬ ಹೆಸರು ಬಂದಿತೆಂದು ತಿಳಿದು





ಬರುತ್ತಿದೆ ಬದನವಾಳಿನಲ್ಲಿ ಮೂರು ಹೊಯ್ಸಳ ಶಾಸನಗಳು ದೊರಕಿವೆ. ಮಹಾಲಿಂಗೇಶ್ವರ ಗುಡಿ ಮುಂದಿರುವ ಕ್ರಿ.ಶ. ೧೨೨೮ರ ಶಾಸನವು ಹೊಯ್ಸಳ ಸೋಮೇಶ್ವರ ದೊರೆಯು ಕಣ್ಣಾನೂರಿನಿಂದ ಆಳುತ್ತಿದ್ದಾಗ, ಶ್ರೀ ಗಂಗಾಪುರವಾದ ಬಣವಾಳದ ಮೂಲಸ್ಥಾನ ದೇವರು ಹಾಗೂ ನೊಳಂಬೇಶ್ವರ ದೇವರಿಗೆ ಪ್ರಭುಗೌಡಗಳು ಆರು ಗದ್ಯಾಣದ ಆಯದಿಂದ ಪೂಜೆಗೆ ವ್ಯವಸ್ಥೆ ಮಾಡಿದ್ದನ್ನು ದಾಖಲಿಸುತ್ತದೆ. ಅಂತೆಯೇ ೧೨೪೯ರ ಇನ್ನೊಂದು ಶಾಸನವು ಬಹಳ ಹಾಳಾಗಿದ್ದು ಅದರ ವಿವರ ಲಭ್ಯವಿಲ್ಲ. ವಿಜಯಮ್ಮನ ಗುಡಿ ಮುಂದಿರುವ ೧೩೪೯ರ ವೀರಗಲ್ಲು ಶಾಸನವು ಮಡಿದ ದೊಡ್ಡ ತಮ್ಮಣ್ಣನಿಗೆಂದು ವೀರಗಲ್ಲು ನಿಲ್ಲಿಸಿದ್ದನ್ನು ದಾಖಲಿಸುತ್ತದೆ. ಇಲ್ಲಿಯ ಮಹಾಲಿಂಗೇಶ್ವರ ಗುಡಿಯು ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡಿದೆ. ಶಾಸನದಲ್ಲಿ ಇದನ್ನು ಮೂಲಸ್ಥಾನ ದೇವರೆಂದು ಕರೆಯಲಾಗಿದೆ.

ಬದನವಾಳು ಗ್ರಾಮದ ಹೊರಗೆ ಸಿದ್ಧೇಶ್ವರ ಸ್ವಾಮಿ ದೇವಾಲಯವಿದೆ. ಈ ದೇವಸ್ಥಾನವು ೧೩ ಎಕರೆ ೩೦ ಕುಂಟೆ ಭೂಮಿಯನ್ನು ಹೊಂದಿದೆ. ಸುಮಾರು ೮೦೦ ವರ್ಷಗಳ ಇತಿಹಾಸವಿರುವ ಈ ದೇವಸ್ಥಾನವು ಪೂರ್ವ

ಬಾಗಿಲಿನಿಂದ ಹೋದರೆ ಶ್ರೀ ಶಂಕರೇಶ್ವರ ದೇವರಿದ್ದು, ಮುಂಭಾಗದಲ್ಲಿ ಬಸವನಿದೆ. ದಕ್ಷಿಣ ಬಾಗಿಲಿನಿಂದ ಹೋದರೆ ಶ್ರೀ ಸಿದ್ಧೇಶ್ವರ ದೇವರು ಅಶ್ವಾರೋಹಿಯಾಗಿರುತ್ತಾರೆ. ದೇವಸ್ಥಾನದ ಬಲಭಾಗದಲ್ಲಿ ಹುತ್ತವಿದ್ದು ಈಗಲೂ ಆಗಾಗ್ಗೆ ಸರ್ಪ ಕಾಣಿಸಿ ಕೊಳ್ಳುತ್ತಿರುತ್ತದೆ ಎನ್ನುತ್ತಾರೆ. ದೇವಸ್ಥಾನದ ಎಡ ಭಾಗದ ಹಿಂಭಾಗದಲ್ಲಿ ಪಣೆಮರ ಸುಮಾರು ೬೦–೭೦ ಅಡಿ ಎತ್ತರದಲ್ಲಿದೆ. ಇದನ್ನು ಪೂಜಿಸಿದರೆ ಗಾಳಿ, ಪಿಶಾಚಿ, ಮಕ್ಕಳಿಗೆ ಬಾಲಗ್ರಹ ಮುಂತಾದ ಬಾಧೆಗಳು ನಿವಾರಣೆಯಾಗುತ್ತದೆ ಎಂಬ ನಂಬಿಕೆಯಿದೆ. ದೇವಸ್ಥಾನದ ಎರಡೂ ಭಾಗದಲ್ಲಿ ಬಿಲ್ವ ಪತ್ರೆ ಮರಗಳಿವೆ. ಈಗಿನ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಶ್ರೀ ಸಣ್ಣೇಗೌಡರು ಹಾಗೂ ಕಾರ್ಯದರ್ಶಿ ಶ್ರೀ ಕುರಹಟ್ಟಿ ಮಹೇಶ್‌ರವರ ಪ್ರಯತ್ನದಿಂದ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ಕಲ್ಯಾಣಮಂಟಪ ನಿರ್ಮಾಣ ಗೊಂಡಿದ್ದು ಕರೋನಾ ಸಂದರ್ಭದಲ್ಲಿ ೫೦ ಸರಳ ಮದುವೆಗಳು ನಡೆದವೆಂದು ಈ ದೇವಸ್ಥಾನದ ಮೇಲ್ವಿಚಾರಣೆ ನೋಡಿ ಕೊಳ್ಳುತ್ತಿರುವ ಶ್ರೀ ಸಿದ್ದಪ್ಪನವರು ತಿಳಿಸಿದರು. ಈ ದೇವಸ್ಥಾನದ ಹಿಂಭಾಗದಲ್ಲಿ ವೀರಗಲ್ಲುಗಳು ಇವೆ. ತಮಿಳುನಾಡು, ಕರ್ನಾಟಕದ ವಿವಿಧ ಭಾಗಗಳಲ್ಲಿರುವ ೨೫,೦೦೦ಕ್ಕೂ ಹೆಚ್ಚು ಕುಟುಂಬಗಳ ಕುಲದೈವ ಸಿದ್ಧೇಶ್ವರಸ್ವಾಮಿ.

















ಬದನವಾಳು ಗ್ರಾಮವು ಪೂರ್ವದಲ್ಲಿ ಚಾಮರಾಜನಗರ ತಾಲ್ಲೂಕು, ಪಶ್ಚಿಮದಲ್ಲಿ ಮೈಸೂರು ತಾಲ್ಲೂಕು, ಉತ್ತರದಲ್ಲಿ ತಿ. ನರಸೀಪುರ ತಾಲ್ಲೂಕು ಹಾಗೂ ದಕ್ಷಿಣದಲ್ಲಿ ಗುಂಡ್ಲುಪೇಟೆ ತಾಲ್ಲೂಕುಗಳಿಂದ ಸುತ್ತುವರಿಯಲ್ಪಟ್ಟಿದೆ. ೨೦೧೧ರ ಜನಗಣತಿಯ ಪ್ರಕಾರ ಇಲ್ಲಿಯ ಒಟ್ಟು ಜನಸಂಖ್ಯೆ ೨೭೮೪. ಇಲ್ಲಿ ೬೩೨ ಮನೆಗಳಿವೆ. ಮಹಿಳೆಯರ ಜನಸಂಖ್ಯೆ ಶೇ ೫೦% ರಷ್ಟಿದೆ. ಸಾಕ್ಷರತೆಯ ಪ್ರಮಾಣ ೫೭.೫%. ಮಹಿಳಾ ಸಾಕ್ಷರತೆ ೨೫.೪%. ಬದನವಾಳುವಿನಲ್ಲಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಸರ್ಕಾರಿ ಆರೋಗ್ಯ ಕೇಂದ್ರಗಳಿವೆ. ಮೈಸೂರಿನಿಂದ ಚಾಮರಾಜನಗರಕ್ಕೆ ಹೋಗುವ ಮಧ್ಯೆ ಇಲ್ಲಿಯೇ ನರಸಾಂಬುದಿ ರೈಲ್ವೆ ನಿಲ್ದಾಣ ಬರುತ್ತದೆ. ಈ ಗ್ರಾಮದ ಒಟ್ಟು ವಿಸ್ತಾರ ೯೨೧.೨೮ ಹೆಕ್ಟೇರುಗಳು. ಬದನವಾಳು ಗ್ರಾಮವು ನಂಜನಗೂಡು ವಿಧಾನಸಭೆ ಹಾಗೂ ಚಾಮರಾಜನಗರ ಪಾರ್ಲಿಮೆಂಟರಿ ಕ್ಷೇತ್ರಗಳಿಗೆ ಬರುತ್ತದೆ.

ಕರ್ನಾಟಕದಲ್ಲಿ ಗಾಂಧೀಜಿಯವರು ಹಲವಾರು ಬಾರಿ ಪ್ರವಾಸ ಮಾಡಿದ್ದಾರೆ. ಕರ್ನಾಟಕದೊಂದಿಗೆ ಗಾಂಧೀಜಿಯ ಸಂಬಂಧ ಬಹ

ನಿಕಟವಾಗಿತ್ತು. ಅದಕ್ಕೆ ಕರ್ನಾಟಕವನ್ನು 'ಗಾಂಧೀಪ್ರಾಂತ್ಯ' ಎಂದು ಕರೆಯುವುದು ರೂಢಿಯಾಗಿತ್ತು. ಗಾಂಧೀಜಿಯವರು ಮೈಸೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಬದನನವಾಳಗೂ ಭೇಟಿ ನೀಡಿ ಖಾದಿ ಗ್ರಾಮೋದ್ಯೋಗ ಕೇಂದ್ರದ ಸ್ಥಾಪನೆಗೆ ಕಾರಣಕರ್ತರಾಗಿದ್ದು ವಿಶಿಷ್ಟ ಸಂಗತಿಯಾಗಿದೆ. ಖಾದಿ ಪ್ರವಾಸ ಕೈಗೊಂಡಿದ್ದ ಮಹಾತ್ಮರು ಬದನವಾಳಿಗೆ ಭೇಟಿ ನೀಡಿರುವುದನ್ನು ನೋಡುವ ಮುನ್ನ ಗಾಂಧೀಜಿಯುವರ ರಚನಾತ್ಮಕ ಕಾರ್ಯಕ್ರಮ ಹಾಗೂ ಖಾದಿ ಗ್ರಾಮೋದ್ಯೋಗವು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಒಂದು ಪ್ರಮುಖ ಅಸ್ತ್ರವಾಗಿ ಬೆಳೆದ ಅಂಶವನ್ನು ಮೊದಲು ಅವಲೋಕಿಸೋಣ.

## ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮ

೧೯೨೦–೨೧ರಲ್ಲಿ ಗಾಂಧೀಜಿಯವರ ಅಸಹಕಾರ ಚಳುವಳಿಗೆ ಕರೆ ನೀಡಿದಾಗ ಸಹಸ್ರಾರು ಜನರು ಗಾಂಧೀಜಿಯವರ ಕರೆಗೆ ಓಗೊಟ್ಟು ಹೋರಾಟದಲ್ಲಿ ಧುಮುಕಿದರು. ಗಾಂಧೀಜಿಯವರ ಪ್ರಕಾರ ಸ್ವರಾಜ್ಯವೆಂದರೆ ಅತ್ಯುತ್ತಮ ಮಾನವೀಯ ಮೌಲ್ಯಗಳನ್ನೊಳಗೊಂಡ ಹೊಸ ಭಾರತೀಯ ಸಮಾಜದ ನಿರ್ಮಾಣ. ಅದಕ್ಕಾಗಿ ಬ್ರಿಟಿಷರ ವಿರುದ್ಧದ ಹೋರಾಟದೊಂದಿಗೆ ರಚನಾತ್ಮಕ ಕಾರ್ಯಕ್ರಮವನ್ನು ಘೋಷಿಸಿದರು. ರಚನಾತ್ಮಕ ಕಾರ್ಯಕ್ರಮಗಳೆಂದರೆ– ಕೋಮು ಸೌಹಾರ್ದತೆಯ ಬೆಳವಣಿಗೆ, ಅಸ್ಪೃಶ್ಯತಾ ನಿವಾರಣೆ, ಖಾದಿ ಹಾಗೂ ಗ್ರಾಮೋದ್ಯೋಗಗಳ ಅಭಿವೃದ್ಧಿ, ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮಗೊಳಿಸುವುದು, ದೇಶೀಯ ಶಿಕ್ಷಣ ಪ್ರಸಾರ ಮುಂತಾದವು. ರಚನಾತ್ಮಕ ಕಾರ್ಯಕ್ರಮಗಳಿಗೆ ಒತ್ತು ನೀಡುವುದಕ್ಕಾಗಿ ಪ್ರಮುಖ ನಾಯಕರಾಗಿದ್ದ ರಾಜಗೋಪಾಲಚಾರಿ, ವಲ್ಲಭಾಯ್ ಪಟೇಲ್, ರಾಜೇಂದ್ರಪ್ರಸಾದ್, ಆರ್.ಎಸ್. ಧೋತ್ರೆ ಮತ್ತಿತರರು ಗಾಂಧೀ ಸೇವಾ ಸಂಘವನ್ನು ಸ್ಥಾಪಿಸಿದರು. ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಗಾಂಧೀಜಿಯವರು ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕಾಗಿ ಸಂಘಟಿಸಲು ಸಾಧ್ಯವಾಯಿತು. ರಚನಾತ್ಮಕ ಕಾರ್ಯಕ್ರಮವು ಗಾಂಧೀಜಿಯವರ ಕೈಯಲ್ಲಿ ರಾಷ್ಟ್ರದ ಬಿಡುಗಡೆಯ ಪ್ರಮುಖ ಅಸ್ತ್ರವಾದುದೇ ಅಲ್ಲದೆ ಹೊಸ ರಾಷ್ಟ್ರ ನಿರ್ಮಾಣ ಪ್ರಕ್ರಿಯೆಗೆ ಸುಭದ್ರ ಬುನಾದಿಯನ್ನು ಹಾಕಿತು. ಗಾಂಧೀಜಿಯವರ ಪ್ರಕಾರ "ರಚನಾತ್ಮಕ ಕಾರ್ಯಕ್ರಮವನ್ನು ಸತ್ಯ ಹಾಗೂ ಅಹಿಂಸೆಯ ಮೂಲಕ ಪೂರ್ಣ ಸ್ವರಾಜ್ಯದ ನಿರ್ಮಾಣ ಎಂದು ಕರೆಯಬಹುದು.



ರಚನಾತ್ಮಕ ಕಾರ್ಯಕ್ರಮಗಳ ಗುರಿಯೆಂದರೆ ನಾವು ಬಯಸುವ ಸ್ವಾತಂತ್ರ್ಯವೇ ಆಗಿದೆ".

ರಚನಾತ್ಮಕ ಕಾರ್ಯಕ್ರಮದಲ್ಲಿ ಖಾದಿಗೆ ಹೆಮ್ಮೆಯ ಸ್ಥಾನವಿದೆ. ಗಾಂಧೀಜಿಯವರು "ಖಾದಿ ಎಂಬುದು ನನಗೆ ಭಾರತೀಯ ಮಾನವತೆಯ ಐಕ್ಯತೆಯ ಸಂಕೇತವಾಗಿದೆ. ಹಾಗೂ ಆರ್ಥಿಕ ಸ್ವಾತಂತ್ರ್ಯ ಹಾಗೂ ಸಮಾನತೆಯ ಸಂಕೇತವಾಗಿದೆ" ಎಂದಿದ್ದಾರೆ. ಜೀವನಾವಶ್ಯಕ ಸಾಮಾಗ್ರಿಗಳ ಉತ್ಪಾದನೆ ಹಾಗೂ ವಿತರಣೆಯ ವಿಕೇಂದ್ರೀಕರಣದ ಸಂಕೇತವೇ ಖಾದಿ. ಹಾಗಾಗಿ ಗಾಂಧೀಜಿಯವರು ಖಾದಿ ಪ್ರಚಾರಕ್ಕೆ ಆದ್ಯಗಮನ ನೀಡಿದರು.

## ಮಹಾತ್ಮ ಗಾಂಧೀಜಿಗೆ ಖಾದಿಯ ನೇಯ್ಗೆಯ ಅರಿವು

೧೯೦೮ರವರೆಗೂ ಗಾಂಧೀಜಿಗೆ ಚರಕ ಅಥವಾ ಮಗ್ಗ ಅಂದರೆ ಏನೂ ಅಂತ ಗೊತ್ತಿರಲಿಲ್ಲ. ೧೯೦೯ರಲ್ಲಿ ದಕ್ಷಿಣ ಆಫ್ರಿಕಾದ ಸಮಸ್ಯೆಯನ್ನು ತೆಗೆದುಕೊಂಡು ಗಾಂಧೀಜಿ ಲಂಡನ್‌ಗೆ ಹೋಗಿದ್ದರು. ಅಲ್ಲಿ ಎಷ್ಟೋ ಜನ ಹಿರಿಯ ಕ್ರಾಂತಿಕಾರಿಗಳನ್ನು ಭೇಟಿ ಮಾಡಿದರು. ಅವರ ಜೊತೆ ದೇಶದ ಉದ್ಧಾರವನ್ನು ಕುರಿತಂತೆ ಗಂಭೀರ ಚರ್ಚೆಗಳು ನಡೆದವು. ಅವರೆಲ್ಲರೂ ಹಿಂಸಾಮಾರ್ಗವನ್ನನುಸರಿಸಿ ದೇಶದ ಪರಾಧೀನತೆಯನ್ನು ಬಡತನವನ್ನು ದೂರ ಮಾಡಬೇಕು ಅಂತ ಪಟ್ಟು ಹಿಡಿದಿದ್ದರು. ಈ ದೇಶ ಬಂಧುಗಳ ಜೊತೆ ಮಾತನಾಡುವಾಗ ಚರಕ ಇಲ್ಲದೆ ಸ್ವರಾಜ್ಯ ಸಿಗುವುದು ಅಸಾಧ್ಯ ಅಂತ ಗಾಂಧೀಜಿಗೆ ಸ್ಪಷ್ಟವಾಗಿ ಅನ್ನಿಸಿತು. ಪ್ರತಿಯೊಬ್ಬ ಹಿಂದೂಸ್ತಾನಿಯೂ ಕೈಯಿಂದ ಬಟ್ಟೆ ನೇಯುವುದು ಅಗತ್ಯವಾಗಿತ್ತು. ನವೆಂಬರ್ ೧೯೦೯ ಕ್ಕೆ ಲಂಡನ್‌ನಿಂದ ಹಿಂದಿರುಗುವಾಗ ಗಾಂಧೀಜಿ 'ಕಿಲಡೋನನ್ ಕಾಸಲ್'ಅನ್ನುವ ಒಂದು ಹಡಗಿನಲ್ಲಿ ಬರುವಾಗ 'ಹಿಂದ್ ಸ್ವರಾಜ್' ಎಂಬ ಪುಸ್ತಕವನ್ನು ಬರೆದರು. ದೇಶದ ಬಡತನವನ್ನು ದೂರ ಮಾಡ ಬೇಕಾದರೆ ಊಟ ತಿಂಡಿಯ ಪದಾರ್ಥಗಳ ಸ್ವಾವಲಂಬನೆಯ ಜೊತೆಗೆ ಬಟ್ಟೆಯ ಸ್ವಾವಲಂಬನೆಯೂ ಅಗತ್ಯ. ಆಗ ಗಾಂಧೀಜಿಗೆ ಮನವರಿಕೆಯಾಯಿತು. ಊಟದ ನಂತರ ಮನುಷ್ಯನಿಗೆ ಬಟ್ಟೆಯ ಅವಶ್ಯಕತೆ ಉಂಟಾಗುತ್ತದೆ,ಬಟ್ಟೆಯ ಅಗತ್ಯವನ್ನು ಮನೆಯಂಗಳದಲ್ಲಿ ಮನೆಯ ಜನರ ಪರಿಶ್ರಮದಿಂದ ಆಗುವುದಾದರೆ ಬಡವ ಕೂಡ ತನ್ನ ಶರೀರವನ್ನು ಮುಚ್ಚಿಕೊಳ್ಳಬಲ್ಲ, ಸ್ವಲ್ಪ ಹಣವೂ ಉಳಿಯುತ್ತದೆ. ಸ್ವಲ್ಪ ಸಂಪಾದನೆ ಕೂಡ

ಮಾಡಬಹುದು. ಮೆಷಿನ್‌ನಿಂದ ನೇಯ್ದ ಬಟ್ಟೆಯನ್ನು ತೊಡುವುದರಿಂದ ಕಡಿಮೆ ಆದಾಯದ ಹೆಚ್ಚು ಭಾಗ ವಿದೇಶಕ್ಕೆ ಇಲ್ಲವೆ ಮಿಲ್ ಮಾಲೀಕರ ವಶಕ್ಕೆ ಹೋಗುತ್ತೆ. ಆಗ ಎಂತಹ ಪರಿಸ್ಥಿತಿಯಲ್ಲೂ ಬಡವ ಮತ್ತಷ್ಟು ಬಡವನಾಗುತ್ತಾ ಇರುತ್ತಾನೆ. ಪರಾವಲಂಬನೆಗೆ ಈ ದೊಡ್ಡ ಮೌಲ್ಯವನ್ನು ತೆರಬೇಕಾಗುತ್ತದೆ. ಆದ್ದರಿಂದ ವಸ್ತ್ರ ಸ್ವಾವಲಂಬನೆಯ ವಿಷಯವನ್ನು ಯೋಚಿಸುತ್ತಾ ಇರುವಾಗ ಗಾಂಧೀಜಿಗೆ ಚರಕ ವಿಷಯ ತಲೆಗೆ ಬಂದಿತ್ತು. ೧೯೧೫ರಲ್ಲಿ ಸ್ವದೇಶಕ್ಕೆ ಹಿಂದಿರುಗಿದಾಗ ಜನರ ಕಡುಬಡತನವನ್ನು ನೋಡಿ ಅವರ ಹೃದಯ ಚರಕವನ್ನು ಹುಡುಕತೊಡಗಿತು.

೧೯೧೭ರಲ್ಲಿ ಗಾಂಧೀಜಿ ಗುಜರಾತ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಚುನಾಯಿತರಾದರು. ನರ್ಮದಾ ನದಿ ತೀರ ಭರೂಚ್‌ನಲ್ಲಿ ಆಗ ಅಧಿವೇಶನ ಜರುಗಿತ್ತು. ಅಲ್ಲೂ ಚರಕನ ಹುಡುಕುತ್ತಲೇ ಇದ್ದರು. ಭರೂಚ್‌ನಲ್ಲಿ ಗಂಗಾಬಹೆನ್ ಮಜೂಮ್‌ದಾರ್ ಎಂಬೊಬ್ಬ ಶ್ರಮಜೀವಿಯಾದ ಮಹಿಳೆಯ ಪರಿಚಯ ಆಯಿತು. ಆಕೆ ಒಬ್ಬಂಟಿ, ಆಕೆಯ ಪತಿ ತೀರಿ ಹೋಗಿದ್ದರು. ಮಕ್ಕಳು–ಮರಿ ಇರಲಿಲ್ಲ. ಆಕೆ ತನ್ನ ಆಲೋಚನೆಗಳ ಪರಿಣಾಮವಾಗಿಯೇ ಅಸ್ಪೃಶ್ಯತೆಯನ್ನು ತನ್ನ ಬಾಳಿನಿಂದ ಹೊರದೂಡಿ ಬಿಟ್ಟಿದ್ದಳು. ಬಂಧು–ಬಾಂಧವರ ಬೆದರಿಕೆಯ ಬಂಧನವನ್ನು ಧೈರ್ಯವಾಗಿ ಕಿತ್ತೊಗೆದು, ಸಮಾಜದ ಉದ್ಧಾರದ ಕಾರ್ಯಗಳಲ್ಲಿ ತನ್ನದೇ ಆದ ರೀತಿಯಲ್ಲಿ ತನ್ನನ್ನು ತೊಡಗಿಸಿ ಕೊಂಡಿದ್ದಳು. ಚರಕ ಕುರಿತ ತನ್ನ ಮನದಾಸೆಯನ್ನು ಗಾಂಧೀಜಿ ಆಕೆಗೆ ಹೇಳಿದರು. ಗಂಗಾಬಹೆನ್ ಈ ಭಗೀರಥ ಕಾರ್ಯವನ್ನು ವಹಿಸಿಕೊಂಡಳು. ಚಳಿ–ಮಳೆ–ಬಿಸಿಲು ಯಾವುದರ ಪರಿವೆ ಇಲ್ಲದೆ ಯಾವ ಶ್ರಮವೂ ಇಲ್ಲದೆ ಆಕೆ ಹಳ್ಳಿಗಳು, ಮನೆಗಳು, ಎಲ್ಲಾ ಸುತ್ತಿದಳು. ಜನರ ಹಳೆ ವಸ್ತುಗಳ ಸಂಗ್ರಹದಲ್ಲಿ ಮುರಿದ ಛಾವಣಿಗಳ ಮೇಲೆ ಜರ್ಜರಿತವಾದ ಮನೆಗಳ ಅಟ್ಟಗಳಲ್ಲಿ ಹುಡುಕುತ್ತಾ ತಿರುಗಿದಳು. ಕೊನೆಗೆ ಮಹಾರಾಜಾ ಗಾಯಕವಾಡರ ಖಡ್‌ದಾ ರಾಜ್ಯದ ಬೀಜಾಪುರ ಎಂಬ ಹಳ್ಳಿಯ ಪುಟ್ಟದೊಂದು ಮನೆಯ ಛಜ್ಜಾ ಮೇಲೆ ಒಂದು ಮುರಿದಿದ್ದ ಧೂಳಿನಿಂದ ತುಂಬಿದ್ದ ಚರಕ ಸಿಕ್ಕೇಬಿಟ್ಟಿತು. ಬಹಳ ಬೇಡಿ ಗಂಗಾಬಹೆನ್ ಆ ಮುಸ್ಲಿಂ ಮನೆಯಾತನಿಂದ ಆ ಚರಕ ಪಡೆದು ಅದನ್ನು ರಿಪೇರಿ ಮಾಡಿಸಿ ಅದನ್ನು ಉಪಯೋಗಿಸುವ ರೀತಿಯನ್ನು ಕಲಿತಳು. ಬಹಳ ಹಳೆಯ ಕಾಲದ ಆ ಚರಕವನ್ನು ತೆಗೆದುಕೊಂಡು ಆಕೆ ಸಾಬರಮತಿ ಆಶ್ರಮಕ್ಕೆ ಬಂದಳು. ಆಶ್ರಮವೆಲ್ಲಾ



ಈ ಅದ್ಭುತ ಅನ್ವೇಷಣೆಯನ್ನು ನೋಡಿ ಕುಣಿದಾಡಿತು. ಗಾಂಧೀಜಿಯ ಉತ್ಸಾಹ ಆನಂದ ಇಮ್ಮಡಿಸಿತು. ಈಗ ಹಿಂದೂಸ್ತಾನ ಹಸಿವಿನಿಂದ ನರಳುವ ಅರ್ಧ ಬೆತ್ತಲೆಯ ರೈತನಿಗೆ ಊಟ–ತಿಂಡಿಯ ಸಹಾಯಕ ಸಾಧನ ಸಿಗಲಿದೆ ಎಂಬಾಸೆ ಜಾಗೃತವಾಯಿತು. ಪರದಾ ಪದ್ಧತಿಯ ಹಿಂದುಳಿದ ಮಹಿಳೆಯರು ಕೂಡ ತಮ್ಮ ಒಲೆ, ಬೀಸುವಕಲ್ಲು ಮತ್ತು ಮಕ್ಕಳ ನಡುವೆ ಸಮಯ ಸಾಧಿಸಿ ಮನೆಯಲ್ಲಿ ಕುಳಿತೇ ಚರಕ ನಡೆಸಿ ಸ್ವತಂತ್ರವಾಗಿ ಸಂಪಾದನೆ ಮಾಡಬಲ್ಲರು ಮತ್ತು ಅವರ ಭಯಂಕರವಾದ ಬಡತನ ದೂರವಾಗುವುದು ಎಂದನ್ನಿಸಿತು.

ಚರಕ ಏನೋ ಬಂತು, ಆದರೆ ಹತ್ತಿರ ಲಡಿ ಸಿಗುತ್ತಿರಲಿಲ್ಲ. ಬಿಜಾಪುರ ಹಳ್ಳಿಯ ಜನ ತಮ್ಮ ಮುರಿದಿರುವ ಚರಕ ಸರಿಮಾಡಿ ನೂಲುತ್ತೇವೆಂದು ನಂಬಿಕೆ ನೀಡಿದರು. ಆದರೆ ಅವರ ಹತ್ತಿರ ಹತ್ತಿ ಲಡಿಗಳಿರಲಿಲ್ಲ. ಗಾಂಧೀಜಿ ಉಮರ್ ಸುಭಾನಿಗೆ ಇದನ್ನ ಹೇಳಿದರು. ಆತನ ತನ್ನ ಮಿಲ್ಲಿನ ಹತ್ತಿಯಿಂದ ಮಾಡಿದ ಲಡಿಗಳನ್ನು ಗಾಂಧೀಜಿಗೆ ಕಳುಹಿಸಿಕೊಟ್ಟರು. ಇದರಿಂದಲೂ ಸಮಸ್ಯೆ ದೂರವಾಗುವಂತಿರಲಿಲ್ಲ. ಉಮರ್ ಸುಭಾನಿ ಉದಾರಿಗಳು. ಬೇಡಿದಷ್ಟು ಲಡಿಗಳನ್ನು ಕಳುಹಿಸಿ ಕೊಡುತ್ತಿದ್ದರು. ಆದರೆ ಆ ಸಜ್ಜನನ ಉಪಕಾರವನ್ನು ಪಡೆಯುತ್ತಲೇ ಇರುವದೂ ಸರಿಯಲ್ಲ ಅನಿಸುತ್ತಿತ್ತು. ಅದಲ್ಲದೆ, ಈ ಲಡಿಗಳು ಮೆಷಿನ್‌ನಿಂದ ಮಾಡಿದ್ದವು. ಹಳೆಯ ಕಾಲದಲ್ಲಿ ಮೆಷಿನ್‌ನಿಂದ ಮಾಡಿದ ಲಡಿಗಳೇನೂ ಸಿಗುತ್ತಿರಲಿಲ್ಲ. ಆದರೆ ಅವರು ಲಡಿ ಹೇಗೆ ಮಾಡುತ್ತಿದ್ದರು ಅನ್ನುವುದು ಕೂಡ ಗೊತ್ತಿರಲಿಲ್ಲ. ಲಡಿ ಮಾಡುವವನನ್ನು ಹುಡುಕುವ ಜವಾಬ್ದಾರಿಯನ್ನು ಗಂಗಾ ಬಹೆನ್ ತಾನು ಹೊತ್ತು ಕೊಂಡಳು.

ಆಕೆ ಒಬ್ಬ ದಾರ ತೆಗೆಯುವವನನ್ನ ಹುಡುಕಿದಳು. ಅವನು ತಿಂಗಳಿಗೆ ೫೦ ರೂಪಾಯಿ ಸಂಬಳ ಬೇಕು ಅಂದ, ಆ ಕಾಲದ ೫೦ ರೂಪಾಯಿ ಅಂದ್ರೆ ಇವತ್ತಿನ ೫೦,೦೦೦ ರೂಪಾಯಿಗೆ ಸಮ. ಆದರೆ ಗಾಂಧೀಜಿ ಎಷ್ಟೇ ಹೆಚ್ಚಾದರೂ ಹಣ ಕೊಟ್ಟು ನೂಲುವ ಲಡಿ ಮಾಡುವ ಕಲೆಯನ್ನು ತಮ್ಮದಾಗಿ ಮಾಡಿ ಕೊಳ್ಳ ಬಯಸುತ್ತಿದ್ದರು. ಆಗ ಹತ್ತಿಯ ಹುಡುಕಾಟ ಶುರುವಾಯಿತು. ಯಶವಂತ ಪ್ರಸಾದ ದೇಸಾಯಿ ಎಂಬ ಒಬ್ಬರು ಹತ್ತಿಯನ್ನು ತಂದರು. ಇಬ್ಬರು ವಿದ್ಯಾರ್ಥಿಗಳನ್ನು ಆ ನೂಲುವವನ ಬಳಿ ತರಬೇತಿಗಾಗಿ ತಯಾರು ಮಾಡಲಾಯಿತು. ಆ ರೀತಿ ಹತ್ತಿ ಸರಿ ಮಾಡುವುದು, ಲಡಿ ಮಾಡುವುದು

ಶುರುವಾಯಿತು. ಆಗ ಇವೆಲ್ಲಾ ಬಿಜಾಪುರದಲ್ಲಿ ನಡೆಯುತ್ತಿದ್ದಾಗ, ಸಾಬರಮತಿ ಆಶ್ರಮದಲ್ಲಿ ಮಗ ನಲಾಲ ಗಾಂಧೀ ಚರಕ ಪ್ರಯೋಗ ನಡೆಸುತ್ತಿದ್ದರು. ಮತ್ತೆ ಆ ಎಳೆಗಳಿಂದ ಖಾದಿ ನೇಯ್ಗೆ ಕೂಡ ಆರಂಭವಾಯಿತು. ಮೊದಲ ಖಾದಿ ೧೭ ಹಣೆ ಗಜದ ಹಾಗೆ ತಯಾರಾಯಿತು. ಅಷ್ಟು ಖರ್ಚಿನಲ್ಲಿ ಮಿಲ್‌ನ ಪಂಚೆ ಪೂರ್ತಿ ಸಿಗುತ್ತಿತ್ತು. ಆದರೆ ಗಾಂಧೀಜಿಗೆ ಈ ಖರ್ಚೆಲ್ಲಾ ಒಪ್ಪಿಗೆ ಇತ್ತು. ಎಷ್ಟೋ ಜನ ಸ್ನೇಹಿತರೂ ಹೆಚ್ಚು ಬೆಲೆಯ ಆ ದಪ್ಪ ಬಟ್ಟೆಯನ್ನು ನಗು–ನಗುತ್ತಾ ಕೊಂಡಿದ್ದರು.

ಅವಂತಿಕಾ ಬಾಯಿ ಮತ್ತು ಶಂಕರಲಾಲ ಬ್ಯಾಂಕರನ ವೃದ್ಧತಾಯಿ ಮತ್ತು ವಸುಮತಿ ಬೆಹನ್ ಇಬ್ಬರೂ ಚರಕ ನಡೆಸುವುದನ್ನು ಕಲಿತು ಬಿಟ್ಟಿದ್ದರು. ಆ ಚರಕ ಧ್ವನಿ ಕೇಳಿಯೇ ಗಾಂಧೀಜಿಗೆ ಆನಂದವಾಗುತ್ತಿತ್ತು. ಅವರ ಆರೋಗ್ಯ ಸುಧಾರಿಸ ತೊಡಗಿತು. ಆ ದಿನಗಳಲ್ಲೇ ಹರಿಜನರೊಬ್ಬರೂ ರಾಮ್‌ಜೀ ಬಾಯಿ ಮತ್ತು ಅವರ ಪತ್ನಿ ಗಂಗಾ ಆಶ್ರಮದಲ್ಲಿ ಬಂದು ನೆಲಸಿದರು. ಅವರಿಬ್ಬರು ಆಶ್ರಮವಾಸಿಗಳಿಗೆ ನೇಯ್ಗೆಯನ್ನು ಕಲಿಸಿದರು.

ಎಲ್ಲ ಆಶ್ರಮವಾಸಿಗಳು ಆಶ್ರಮ ಪ್ರೇಮಿ ಜನರು ಚರಕ ತಿರುಗಿಸುವುದನ್ನು ಕಲಿತರು. ಕಾಂಗ್ರೆಸ್ ಅಧಿವೇಶನಗಳಲ್ಲೂ ಗಾಂಧೀಜಿ ತಮ್ಮ ಜೊತೆ ಚರಕವನ್ನು ತೆಗೆದುಕೊಂಡು ಹೋಗುತ್ತಿದ್ದರು. ನೂಲು ತೆಗೆಯದೆ ಊಟ ಮಾಡುವುದಿಲ್ಲವೆಂದು ಗಾಂಧೀಜಿ ನಿಯಮನ್ನೇ ಮಾಡಿ ಕೊಂಡಿದ್ದರು. ನಿಧಾನವಾಗಿ ಖಾದಿ ಪ್ರಚಾರ ಹೆಚ್ಚಾಯಿತು. ಮೊದಲು ಮುಖಂಡರು ಖಾದಿಯನ್ನು ತಮ್ಮದಾಗಿಸಿ ಕೊಂಡರು. ಅನಂತರ ದೇಶದಲ್ಲಿ ಎಲ್ಲೆಡೆ ಖಾದಿ ಸಂಚರಿಸ ತೊಡಗಿತು. ಆಗ ಗಾಂಧೀಜಿ ಅಖಿಲ ಭಾರತೀಯ ಚರಕ ಸಂಘವನ್ನೇ ಸ್ಥಾಪಿಸಿದರು. ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ, ಮಣಿಪುರ–ಅಸ್ಸಾಂನಿಂದ ಕಥಿಯಾವಾಡಿ ಮತ್ತು ಉತ್ತರ ಪಶ್ಚಿಮದಲ್ಲಿ ಸೀಮಾಂತ ಪ್ರದೇಶದಲ್ಲಿ ಖಾದಿ ಉತ್ಪಾದನೆ ಮತ್ತು ವಿತರಣ ಕೇಂದ್ರಗಳು ಸುಮಾರು ದೇಶದಲ್ಲಿ ಎಲ್ಲ ಕಡೆ ಸ್ಥಾಪಿತವಾದವು. ಖಾದಿ ತೊಡುವುದು ಒಂದು ಫ್ಯಾಷನ್ ಆಯಿತು ಮತ್ತು ಸ್ವಾತಂತ್ರ್ಯಾಂದೋಳನದ ಬಲಶಾಲಿ ಸಾಧನವಾಯಿತು. ಬಿಳಿ ಖಾದಿ ಬಟ್ಟೆ ಮತ್ತು ಬಿಳಿ ಟೋಪಿ ಸಭ್ಯರ ಉಡುಪಾಯಿತು.

ನೂಲು ತೆಗೆಯುವುದು ಮತ್ತು ಖಾದಿಯ ಉಪಯೋಗ ಈ



ಕೆಳಕಂಡಂತಿವೆ: ಕೆಲಸವಿಲ್ಲದ ಬಡವ ನಾಲ್ಕು ಕಾಸು ಸಂಪಾದಿಸಬೇಕು ಅಂದರೆ ಅವನಿಗೆ ಖಾದಿ ಒಂದು ಶ್ರೇಷ್ಠ ಉದ್ಯೋಗ. ಲಕ್ಷಾಂತರ ಜನಗಳಿಗೆ ನೂಲಲು ಬರುತ್ತದೆ. ತಕ್ಷಣ ಕಲಿತು ಕೊಳ್ಳ ಬಹುದು ನೂಲುವ ಕೆಲಸಕ್ಕೆ ಅತಿ ಕಡಿಮೆ ಹಣ ಇದ್ದರೂ ಸಾಕಾಗುತ್ತದೆ. ಚರಕನ ಬಹಳ ಸುಲಭವಾಗಿ ಮಾಡಬಹುದು. ನೂಲುವುದನ್ನು ಯಾರು ತಿರಸ್ಕರಿಸುವುದಿಲ್ಲ. ಕ್ಷಾಮದ ಕಾಲದಲ್ಲಿ ಚರಕ ಉತ್ತಮವಾದ ಪರಿಹಾರ ಕಾರ್ಯವಾಗ ಬಲ್ಲದು. ಚರಕದಿಂದಲೇ ಹಳ್ಳಿಯ ಹಣ ಹಳ್ಳಿಯಲ್ಲೇ ಉಳಿಯುವ ಹಾಗೆ ಮಾಡ ಬಹುದು. ಚರಕದಿಂದ ಸಿಕ್ಕ ಪುಟ್ಟ ಸಫಲತೆಯಿಂದ ಲಕ್ಷಾಂತರ ಮಂದಿಗೆ ಲಾಭ ಸಿಗುವ ಸಾಧ್ಯತೆ ಇದೆ.ಸಹಯೋಗ ಮತ್ತು ಸಹಕಾರದ ಅತ್ಯುತ್ತಮ ಸಾಧನ ಇದು.

## ನಂದಿ ಬೆಟ್ಟದಲ್ಲಿ ಗಾಂಧೀಜಿ

ಗಾಂಧೀಜಿಯವರು ೧೯೨೭ರಲ್ಲಿ ದೇಶದಾದ್ಯಂತ ಖಾದಿ ಪ್ರಚಾರಕ್ಕಾಗಿ ಪ್ರವಾಸ ಕೈಗೊಂಡಾಗ ಮಧ್ಯದಲ್ಲಿ ಅವರಿಗೆ ಅನಾರೋಗ್ಯ ಉಂಟಾಯಿತು. ಅವರು ವಿಶ್ರಾಂತಿ ತೆಗೆದು ಕೊಳ್ಳಬೇಕೆಂದು ವೈದ್ಯರು ಆಗ್ರಹ ಪಡಿಸಿದರು. ಮೈಸೂರು ಸರ್ಕಾರ ಮಹಾತ್ಮರಿಗೆ ಮೈಸೂರು ಸಂಸ್ಥಾನಕ್ಕೆ ಬಂದು ನಂದಿ ಬೆಟ್ಟದಲ್ಲಿ ವಿಶ್ರಾಂತಿ ತೆಗೆದು ಕೊಳ್ಳ ಬೇಕೆಂದು ಆಹ್ವಾನ ನೀಡಿತು. ಗಾಂಧೀಜಿಯವರು ಕಸ್ತೂರಬಾ ಗಾಂಧಿ, ಮಹದೇವ ದೇಸಾಯಿ, ಸಿ.ರಾಜಗೋಪಾಲಾಚಾರಿ, ಗಂಗಾಧರರಾವ್ ದೇಶಪಾಂಡೆಯವರ ಜೊತೆಯಲ್ಲಿ ನಂದಿ ಬೆಟ್ಟದಲ್ಲಿ ಸುಮಾರು ಎರಡು ತಿಂಗಳ ಕಾಲ ತಂಗಿದ್ದು ವಿಶ್ರಾಂತಿ ಪಡೆದರು. ಅನಂತರ ಮೈಸೂರು ಸಂಸ್ಥಾನದ ಅನೇಕ ಊರುಗಳಿಗೆ ಭೇಟಿ ನೀಡಿ ಖಾದಿ ಪ್ರಚಾರ ನಡೆಸಿದರು.

## ಅರಮನೆಗಳ ನಗರ ಮೈಸೂರಿನಲ್ಲಿ:

ಗಾಂಧೀಜಿಯು ಅವರ ಪರಿವಾರವೂ ೧೯೨೭, ೧೯ನೇ ತಾರೀಖು ಮೈಸೂರಿಗೆ ಬಂದರು. ೨೩ರವರೆಗೂ ಅಲ್ಲಿ ಕಾರ್ಯಕ್ರಮ. ಗಾಂಧೀಜಿಗೂ ಅವರ ಪರಿವಾರಕ್ಕೂ ಶೇಷಾದ್ರಿ ಗೃಹದಲ್ಲಿ ತಂಗಲು ಸರಕಾರ ಎಲ್ಲ ವ್ಯವಸ್ಥೆಯನ್ನೂ ಮಾಡಿತ್ತು. ರೈಲು ನಿಲ್ದಾಣದಲ್ಲಿ ಜಿಲ್ಲಾಧಿಕಾರಿಯೂ, ಮಹಾರಾಜರ ಹುಜೂರು ಕಾರ್ಯದರ್ಶಿಯೂ ಅವರನ್ನು ಇಳಿಸಿ ಕೊಂಡರು. ಮೈಸೂರು ನಗರದಲ್ಲಿ ಒಂದು ಸ್ವಾಗತ ಸಮಿತಿ ರಚಿತವಾಗಿತ್ತು. ಅದರ ಮುಖ್ಯಸ್ಥರಾಗಿ ದಿ. ವಕೀಲ

ಲಕ್ಷ್ಮೀನಾರಾಯಣ ರಾಯರು, ಸಿ. ನರಸಿಂಹಯ್ಯನವರೂ, ಅಗರಂ ರಂಗಯ್ಯನವರೂ ಬಂದಿದ್ದು ನಿಲ್ದಾಣದಲ್ಲಿ ಸ್ವಾಗತ ನೀಡಿದರು. ಸ್ವಾಗತ ಸಮಿತಿಯು ಪುರಭವನದಲ್ಲಿ ಅವರಿಗೆ ಅದ್ಭುತವಾದ ಸ್ವಾಗತ ನೀಡಿತು. ಜಗನ್ಮೋಹನ ಅರಮನೆಯಲ್ಲಿ ಒಂದು ಮಹಿಳೆಯರ ಸಭೆ ನಡೆಯಿತು. ಸಂಸ್ಥಾನದಲ್ಲಿ ನಡೆದ ಎಲ್ಲಾ ಮಹಿಳಾ ಸಭೆಗಳಲ್ಲಿ ಇದೇ ದೊಡ್ಡದು. ಇಷ್ಟೇ ಅಲ್ಲ, ೧೯೨೧ ರಲ್ಲಿ ಕೂಡ ಇಷ್ಟು ದೊಡ್ಡ ಮಹಿಳೆಯರ ಸಭೆ ನಡೆದಿರಲಿಲ್ಲ. ಮಹಿಳೆಯರ ಕಾಲೇಜಿನ ಪ್ರಿನ್ಸಿಪಾಲ್ ಶ್ರೀಮತಿ ರುಕ್ಮಿಣಿ ಅಮ್ಮನವರು ಅದನ್ನು ಏರ್ಪಡಿಸಿದ್ದರು.

ಸಭೆ ಬಹಳ ವ್ಯವಸ್ಥಿತವಾಗಿ ನಡೆಯಿತು. ಸಭೆ ನಡೆಯುವಾಗ ಸಂಪೂರ್ಣ ನಿಶ್ಯಬ್ದ. ಗಾಂಧೀಜಿಯ ಭಾಷಣವನ್ನು ಎಲ್ಲರೂ ಮನಗೊಟ್ಟು ಕೇಳಿದರು. ಸಭೆ ಮುಗಿದಾಗ ಗಾಂಧೀಜಿಯ ಪಾದಗಳನ್ನು ಮುಟ್ಟಲು ಅಥವಾ ಅವರ ಮೈ ಮೇಲಿದ್ದ ಬಟ್ಟೆಗಳನ್ನು ಮುಟ್ಟಲು ಎಲ್ಲರೂ ವೇದಿಕೆಯ ಕಡೆಗೆ ನುಗ್ಗಿ ಬಂದರು. ಗಾಂಧೀಜಿಗೆ ಇನ್ನೊಂದು ಭೇಟಿ ಕಾದಿತ್ತು. ಅರಮನೆಗೆ ಹೋಗಿ ಮಹಾರಾಜರ ಕುಟುಂಬದವರನ್ನೆಲ್ಲ ಕಂಡು ಬರಬೇಕಾಗಿತ್ತು. ಆ ಗದ್ದಲದಲ್ಲಿ ಬಿಡಿಸಿ ಕೊಂಡು ಹೋಗಲು ಒಂದೇ ಉಪಾಯ ಇದ್ದದ್ದು. ಮೋಟಾರು ವ್ಯಾನು ಹಿಂಭಾಗಕ್ಕೆ ಬರಬೇಕು. ಗಾಂಧೀಜಿ ಅದರಲ್ಲಿ ಹೋಗಿ ಕೂಡಬೇಕು. ಅವರು ಹೋಗಲು ಕೂಡ ಸಾಧ್ಯ ಇರಲಿಲ್ಲ. ಆಗ ಕೇಂದ್ರ ಸ್ವಾಗತ ಸಮಿತಿಯ ಕಾರ್ಯದರ್ಶಿ ಅವರ ಜೊತೆಯಲ್ಲೆ ಇದ್ದರು. ಅವರು ಗಾಂಧೀಜಿಯನ್ನು ಹೆಗಲ ಮೇಲೆ ಹೊತ್ತು ಕೊಂಡು ಹೋಗಿ ಗಾಡಿಯಲ್ಲಿ ಕೂಡಿಸಿದರು. ಇದರಿಂದ ಹೊತ್ತಿಗೆ ಸರಿಯಾಗಿ ಅವರು ಹೋಗುವಂತಾಯಿತು.

ಮೈಸೂರಿನ ಪುರಸಭೆಯವರು ಒಂದು ಬಿನ್ನವತ್ತಳೆ ಅರ್ಪಿಸಿದರು. ಅದಕ್ಕೆ ಉತ್ತರ ಕೊಡುವಾಗ ಪುರ ಸಮಸ್ಯೆಗಳನ್ನು ದಾಟಿ ದೂರ ಹೊರಟು ಹೋದರು. 'ಮೈಸೂರಿನಲ್ಲಿ ಸೊಗಸಾದ ಕಾಲೇಜುಗಳಿವೆ. ಸುಸಜ್ಜಿತ ಪ್ರಾಚ್ಯ ಪುಸ್ತಕ ಭಂಡಾರ, ಅಂದವಾದ ಉದ್ಯಾನಗಳಿವೆ. ಚಾಮುಂಡಿಬೆಟ್ಟ ಇದೆ. ಅದರ ಮೇಲೆ ಕಾಣುವ ವಿದ್ಯುದ್ದೀಪಗಳ ಸಾಲು ಆಕಾಶದಲ್ಲಿ ಒಂದು ನಕ್ಷತ್ರಗಳ ಕಂಠ ಮಾಲೆ ಇದ್ದ ಹಾಗೆ ಇದ್ದವು. ಈ ಪರಿಸರದಲ್ಲಿ ಬೆಂಗಳೂರಿನ ವಿಜ್ಞಾನ ಸಂಸ್ಥೆಯಲ್ಲಿ, ಹೊಲಗೆಲಸ ಮಾಡುತ್ತ ಕಷ್ಟಪಡುತ್ತಿರುವ ಹಳ್ಳಿಯ ಬಡ ರೈತನ



ನೆನಪು ಅವರಿಗೆ ಆಗಿ ಬಹಳ ಕಸಿವಿಸಿ ಎನಿಸಿರಬೇಕು'. ಗಾಂಧೀಜಿ ಸಭೆಯಲ್ಲಿ ಹೇಳಿದರು:

'ನೀವೇನೋ ಖಾದಿ ಕೈಕೊಳ್ಳುವುದಾಗಿ ಭರವಸೆ ಕೊಟ್ಟಿದ್ದೀರಿ. ಇಂಥ ಭರವಸೆಗಳಿಗೆ ಮರುಳಾಗಬಾರದೆಂದು ನನಗೆ ಅನುಭವವಾಗಿದೆ. ನಮ್ಮ ಕಾಲ ಬರೀ ಮಾತಿನ ಕಾಲ. ಆಡಿದಂತೆ ಮಾಡುವುದು ಇನ್ನೂ ಬಹಳ ದೂರವಿದೆ. ನಿಮ್ಮೂರಿನ ಭವ್ಯ ಅರಮನೆಗಳನ್ನೂ, ಸುಂದರ ವಾತಾವರಣವನ್ನೂ ನೋಡಿ ಸಂತೋಷವಾದರೂ ಹೊಲದಲ್ಲಿ ಕಷ್ಟಪಡುತ್ತಿರುವ ರೈತನ ನೆನಪು ನನಗೆ ಆಗುತ್ತದೆ. ಈಗ ರಾಜ್ಯ ಆಳುತ್ತಿರುವ ವರ್ಗವು ರಾಜಕಾರಣಿಗಳ ವರ್ಗವು ತನ್ನ ಬದುಕನ್ನು ಬಡ ರೈತನ ದೃಷ್ಟಿಯಿಂದ ಸರಿಪಡಿಸಿ ಕೊಳ್ಳ ಬೇಕೆಂದು ನಾನು ಹಾತೊರೆಯುತ್ತಿದ್ದೇನೆ. ಇಂದು ಬಡವರಿಗೂ ನಿಮಗೂ ದೊಡ್ಡ ಅಂತರವಿದೆ. ಈ ಅಂತರ ಹೋಗಬೇಕು. ಶ್ರೀಮಂತರ ಬಂಗಲೆಗಳನ್ನೂ, ಮಹಾರಾಜರ ಅರಮನೆಗಳನ್ನೂ ನೋಡಿ ನನಗೆ ಹೊಟ್ಟೆ ಉರಿ ಇಲ್ಲ. ಆದರೆ ರೈತರಿಗೂ ಅವರಿಗೂ ನಡುವೆ ಇರುವ ಈ ಅಗಾಧ ಅಂತರವನ್ನು ಕಡಿಮೆ ಮಾಡಲು ಏನಾದರೂ ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿ ಕೊಳ್ಳುತ್ತೇನೆ. ಅವರ ಸುತ್ತಲೂ ಇರುವ ಬಡವರ ಬದುಕಿನ ಗುರುತು ಅವರ ಜೀವನದಲ್ಲಿ ಕಂಡು ಬರಬೇಕು. ಇಂಥ ಸೇತುವೆ ಒಂದನ್ನು ಕಟ್ಟಲು ನನ್ನ ರೀತಿಯಿಂದ ನಾನು ಹೆಣಗುತ್ತಿದ್ದೇನೆ. ನಿಮ್ಮ ಬಂಗಾರದ ಗಣಿಗಳೂ, ನಿಮ್ಮ ಭದ್ರಾವತಿ ಕಾರಖಾನೆಯೂ ಇದನ್ನು ಕಟ್ಟಲಾರವು. ಈ ಬಂಗಾರ, ಈ ಕಬ್ಬಿಣ ನಮಗೆ ಬೇಕು. ಒಳ್ಳೆಯದಾವುದನ್ನೂ ಕೆಡಿಸುವ ಉದ್ದೇಶ ನನಗಿಲ್ಲ. ಹೊಸದನ್ನು ಕಟ್ಟಿ ಇದ್ದದ್ದನ್ನು ಉತ್ತಮ ಗೊಳಿಸಿ ಸುಧಾರಿಸುವುದು ನನ್ನ ಉದ್ದೇಶ. ಈ ರೀತಿ ನಿಮ್ಮನ್ನು ಬಂಧಿಸ ಬಹುದಾದ ಧರ್ಮ ಬಂಧ ಎಂದರೆ ಖಾದಿನೂಲು. ಗಂಗಾ ನದಿಗೆ ಒಂದು ಕಾಲದಲ್ಲಿ ಋಷಿಕೇಶದ ಬಳಿ ಗಂಗೋತ್ರಿಯವರೆಗೆ ಒಂದು ಹಗ್ಗದ ಸೇತುವೆ ಇತ್ತು (ಲಕ್ಷ್ಮಣ ಝೂಲಾ). ಹಾಗೆ ದರಿದ್ರ ನಾರಾಯಣನನ್ನು ತಲುಪಲು ನೀವು ಒಂದು ಸೇತುವೆ ಕಟ್ಟಿಕೊಳ್ಳಿರಿ. ನಿಮ್ಮ ಮಹಾರಾಜರು ನೂಲುತ್ತಾರೆ ಎಂದು ಕೇಳಿದಾಗ ನನಗೆ ಬಹಳ ಸಂತೋಷವಾಯಿತು' ಎಂದರು.

ಮೈಸೂರು ಪ್ರಾಂತ್ಯದಲ್ಲಿ ಖಾದಿ ಗ್ರಾಮೋದ್ಯೋಗ ಸಂಘಗಳ ಸ್ಥಾಪನೆ

ತಗಡೂರು ರಾಮಚಂದ್ರರಾಯರು ಮೈಸೂರು ಪ್ರಾಂತ್ಯದಲ್ಲಿ ಅಗ್ರಗಣ್ಯ ಹೋರಾಟಗಾರರಾಗಿದ್ದರು. "ಸ್ವರಾಜ್ಯ ಪ್ರೇಮ ಅವರ ರಕ್ತದಲ್ಲೆ ಹರಿಯುತ್ತಿತ್ತು. ರಾಟೆಯ ಭಸ್ಮದ ಮೇಲೆ ಬ್ರಿಟಿಷ್ ಚಕ್ರಾಧಿಪತ್ಯವು ಸ್ಥಾಪಿಸಲ್ಪಟ್ಟಿತು. ರಾಟೆಯ ಸ್ಥಾಪನೆಯಿಂದಲೇ ಬ್ರಿಟಿಷ್ ಚಕ್ರಾಧಿಪತ್ಯವು ಕೊನೆಗಾಣಬೇಕು. ರಾಟೆಯ ಸ್ಥಾಪನೆಯೇ ಸ್ವರಾಜ್ಯದ ಮೂಲಮಂತ್ರ". ತಗಡೂರು ರಾಮಚಂದ್ರ ರಾಯರು ೧೯೨೫ ಜೂನ್ ೧೨ ರಂದು 'ಖದ್ದರ್ ಪರಸ್ಪರ ಸಹಾಯ ಸಂಘ'ವನ್ನು ಸ್ಥಾಪಿಸಿದರು. ೧೯೨೬ ಜೂನ್ ೨ ರಂದು ಶ್ರೀ ಕರ್ಪೂರ ಶ್ರೀನಿವಾಸ ರಾಯರ ಅಧ್ಯಕ್ಷತೆಯಲ್ಲಿ 'ಖಾದಿ ವಸ್ತ್ರಾಲಯ'ವನ್ನು ಆರಂಭಿಸಲಾಯಿತು. ೧೯೨೭ರಲ್ಲಿ ಮಹಾತ್ಮ ಗಾಂಧೀಜಿಯವರು ಅಖಿಲ ಭಾರತ ಚರಕ ಸಂಘದ ಪ್ರಚಾರಕ್ಕಾಗಿ ಪ್ರವಾಸ ಮಾಡುತ್ತಿರುವಾಗ ಮೈಸೂರಿಗೂ ಬಂದರು. ಮೈಸೂರಿನಲ್ಲಿ ನೂಲುವ ಕೇಂದ್ರವೊಂದನ್ನು ಸ್ಥಾಪಿಸುವ ಯೋಜನೆಯನ್ನು ಅವರು ಕೈಗೆತ್ತಿಕೊಂಡಾಗ, ಮೊದಲು ತಗಡೂರಿನೆಡೆಗೆ ಗಮನ ಉಂಟಾಗಿದ್ದು. ಆದರೆ ಅಲ್ಲಿ ಕೈಗಾರಿಕೆಗೆ ವಾತಾವರಣ ಈಗಾಗಲೇ ಸಿದ್ಧವಾಗಿತ್ತು. ಅಂತಹ ಕೇಂದ್ರದ ಸ್ಥಾಪನೆಗೆ ಮೈಸೂರು ಮಹಾರಾಜರ ಸರಕಾರ ತಮ್ಮ ಒಪ್ಪಿಗೆಯನ್ನು ಕೊಟ್ಟಿತ್ತು. ಆದ್ದರಿಂದ ರೈಲು ನಿಲ್ದಾಣವಿರುವ ಬದನವಾಳನ್ನು ನೂಲುವ ಕೇಂದ್ರವನ್ನಾಗಿ ಮಾಡಲಾಯಿತು. ಈ ಕಾರ್ಯ ನಿರ್ವಹಣೆಗಾಗಿ ಹುಬ್ಬಳ್ಳಿ ಚರಕ ಸಂಘದಿಂದ ಶ್ರೀಮಾನ್ ಪೂಜಾರಿಯವರನ್ನೂ ನೇಮಿಸಲಾಯಿತು. ತಗಡೂರಿನಿಂದ ಖಾದಿ ಕೆಲಸಗಾರರಾದ ಶ್ರೀ ವೆಂಕಟನಾರಾಣಪ್ಪ ಮತ್ತು ಶ್ರೀ ವೆಂಕಟಗಿರಿಯಪ್ಪನವರುಗಳನ್ನು ಬದನವಾಳು ಕೇಂದ್ರಕ್ಕೆ ಕಳಿಸಲಾಯಿತು. ತಗಡೂರು ರಾಮಚಂದ್ರರಾಯರ ನಿಕಟ ಬಂಧುಗಳಾದ ಶ್ರೀ ಕೇಶವಮೂರ್ತಿಯವರು ಎರಡು ಬಾರಿ ಬದನವಾಳು ಕೇಂದ್ರದಲ್ಲಿ ಕಾರ್ಯನಿರ್ವಹಿಸಿದ್ದರು.

## ಬದನವಾಳು ಖಾದಿ ಕೇಂದ್ರದ ಸ್ಥಾಪನೆ

ಬದನವಾಳಿನಲ್ಲಿ ೧೯೨೦ರ ದಶಕದಲ್ಲೆ ಖಾದಿ ಉತ್ಪಾದನಾ ಘಟಕ ಆರಂಭವಾಗಿತ್ತು. ೧೯೨೭ರಲ್ಲಿ ಗಾಂಧೀಜಿಯವರು ಖಾದಿ ಪ್ರಸಾರದ ಪ್ರವಾಸ ಮೈಸೂರಿನಲ್ಲಿ ಕೈಗೊಂಡಾಗ ನಾಲ್ವಡಿ ಕೃಷ್ಣರಾಜ ಒಡೆಯರ್‌ರ ಭೇಟಿ ಆಗಿತ್ತು. ಗಾಂಧೀಜಿಯವರು ನಾಲ್ವಡಿಯವರ ನೂಲುವ ಪ್ರೇಮವನ್ನು ಮೆಚ್ಚಿಕೊಂಡು ಸಾಂಪ್ರದಾಯಿಕ ಗ್ರಾಮೋದ್ಯೋಗಗಳ ಪುನಃಶ್ಚೇತನವಾಗ ಬೇಕೆಂದು ತಿಳಿಸಿದರು.



"ಮೈಸೂರಿನಲ್ಲಿ ಸುಪ್ರಸಿದ್ಧ ಇಂಜಿನಿಯರಿದ್ದಾರೆ, ಬಹಳ ಹೆಸರುವಾಸಿಯಾದ ಸಂಗೀತಗಾರರಿದ್ದಾರೆ, ಪ್ರತಿಭಾಶಾಲಿ ಕಲಾಕಾರರಿದ್ದಾರೆ. ಇದರ ಜೊತೆಗೆ ಸುಪ್ರಸಿದ್ಧ ನೂಲುಗಾರರನ್ನು ಸಿದ್ಧಗೊಳಿಸಿ" ಎಂದರು. ಇದರ ಪರಿಣಾಮವಾಗಿ ಬದನವಾಳುವಿನಲ್ಲಿ ೧೯೨೭ ರಲ್ಲಿ ಖಾದಿ ಗ್ರಾಮೋದ್ಯೋಗ ಘಟಕವು ಆರಂಭಗೊಂಡಿತು. ಆರಂಭದಲ್ಲಿ ನಾಲ್ವರು ದಲಿತ ಮಹಿಳೆಯರು ನೂಲಲು ಕೆಲಸಕ್ಕೆ ಸೇರಿ ಕೊಂಡರು. ಈ ಖಾದಿ ಕೇಂದ್ರವು ೯ ಎಕರೆ ಭೂಮಿಯಲ್ಲಿ ಸ್ಥಾಪಿಸಲ್ಪಟ್ಟಿದೆ. ಇಲ್ಲಿ ನೂಲುವ ಚರಕಾ, ನೆಯ್ಗೆಯ ಮಗ್ಗದ ಕೇಂದ್ರ, ಬಣ್ಣ ಹಾಕುವ ಕೇಂದ್ರ ಎಲ್ಲವೂ ಇದೆ. ಎರಡು ಬಾರಿ (೧೯೨೭, ೧೯೩೭ರಲ್ಲಿ) ಗಾಂಧೀಜಿಯವರು ಬದನವಾಳು ಖಾದಿ ಕೇಂದ್ರಕ್ಕೆ ಭೇಟಿ ನೀಡಿದ್ದು ವಿಶಿಷ್ಟ ಸಂಗತಿಯಾಗಿದೆ. ಖಾದಿ ಅಭಿವೃದ್ಧಿಗೆ ಮೈಸೂರು ಸರ್ಕಾರದ ಕೊಡುಗೆಯೂ ಅಪಾರವಾಗಿತ್ತು.

ಗ್ರಾಮೀಣ ಸಣ್ಣ ಗುಡಿ ಕೈಗಾರಿಕೆಗಳ ಬೆಳವಣಿಗೆಗಾಗಿ ಒಂದು ಇಲಾಖೆಯನ್ನು ಸ್ಥಾಪಿಸಲಾಯಿತು. ಕೈಗಾರಿಕಾ ಶಾಲೆಗಳಲ್ಲಿ ಚರಕಗಳಲ್ಲಿ ನೂಲುವ ಬಗ್ಗೆ ತರಬೇತಿ ನೀಡಲಾಯಿತು. ನೂಲುವ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು. ೧೯೨೭ ರಲ್ಲಿ ಬದನವಾಳುವಿನಲ್ಲಿ ಖಾದಿ ಉತ್ಪನ್ನ ಕೇಂದ್ರ ಸ್ಥಾಪನೆಯಾದ ಮೇಲೆ ಹತ್ತಿಯ ನೂಲನ್ನು ತೆಗೆಯಲು ತರಬೇತಿ ನೀಡಲು ಪ್ರದರ್ಶನಕಾರರನ್ನು ನೇಮಿಸಲಾಯಿತು. ಜಿಲ್ಲಾ ಆರ್ಥಿಕ ಸೂಪರಿಡೆಂಟರು ಇದರ ಮೇಲ್ವಿಚಾರಣೆ ನಡೆಸುತ್ತಿದ್ದರು.

ಆರ್ಥಿಕವಾಗಿ ಹಿಂದುಳಿದಿರುವ ಗ್ರಾಮಗಳ ಪುನಶ್ಚೇತನಕ್ಕಾಗಿ ಅಖಿಲ ಭಾರತ ಚರಕಾ ಸಂಘದಿಂದ ೧೦೦೦ ಚರಕಾಗಳನ್ನು ತರಿಸಿ ಬದನವಾಳು ಕೇಂದ್ರದಲ್ಲಿ ಸ್ಥಾಪಿಸಲಾಯಿತು. ಇದು ಸುಮಾರು ೧೮೦೦ ರೂಪಾಯಿಗಳಷ್ಟು ಬೆಲೆ ಬಾಳುವ ಬಟ್ಟೆಯನ್ನು ತಯಾರಿಸುವ ಸಾಮರ್ಥ್ಯವನ್ನು ಹೊಂದಿತ್ತು. ೧೯೨೭ ರಲ್ಲಿ Stores Purchase Committee (ಸಾಮಗ್ರಿಗಳನ್ನು ಕೊಳ್ಳುವ ಸಮಿತಿ)ಯು ಎಲ್ಲಾ ಸರ್ಕಾರಿ ಉದ್ಯೋಗಿಗಳಿಗಾಗಿ ೧೦,೨೦೦ ರೂಪಾಯಿ ಬೆಲೆ ಬಾಳುವ ಖಾದಿ ಬಟ್ಟೆ ಕೊಳ್ಳಲು ಆದೇಶ ನೀಡಿತು. ಇದರಿಂದಾಗಿ ನೂಲುವ ಜೊತೆಗೆ ನೇಯ್ಗೆ ಉದ್ಯಮ, ಬಣ್ಣ ಹಾಕುವುದು, ಚಾಪೆ ಹೆಣೆಯುವುದು, ಕಾಗದ ತಯಾರಿಕೆ ಮುಂತಾದವುಗಳು ಅಭಿವೃದ್ಧಿಗೊಂಡವು.

















**ಈ ಕೆಳಗಿನ ಪಟ್ಟಿಯು ಬದನವಾಳಿನ ಖಾದಿ ನೂಲು ಹಾಗೂ ಮಾರಾಟದ ಬೆಳವಣಿಗೆ ಹಾಗೂ ಸರ್ಕಾರದ ಬೆಂಬಲದ ಅಂಶಗಳನ್ನು ವಿವರಿಸುತ್ತದೆ.**

| ವರ್ಷ | ನೂಲು ತಯಾರಿಕೆ | ಬಟೆಯ ನೇಯ್ಗೆ | ಖರೀದಿ ಮೊತ್ತ ಸರ್ಕಾರ/ಖಾಸಗಿ | ಲಾಭ | ಒಟ್ಟು ವೇತನ. ನೇಯ್ಗೆಯವರ ಕೂಲಿ |
|---|---|---|---|---|---|
| ೧೯೨೭–೨೮ | ೫,೭೬೪ಟ ಛ | ೭,೭೬೫ ಗಜ | ರೂ. ೩,೭೪೧ | | ಪ್ರತಿ ನೇಕಾರ – ರೂ. ೭/- ವೇತನ ತಿಂಗಳಿಗೆ |
| ೧೯೨೮–೨೯ | ೧೪,೬೭೪ ಟಛ | ೩೮,೧೬೮ ಗಜ | ರೂ. ೧೮,೫೦೧ (ರೂ. ೯,೯೪೭/- ಪಬ್ಲಿಕ್‌ಗೆ, ರೂ. ೯,೪೬೩/- ಸರ್ಕಾರದ ವಿವಿಧ ಇಲಾಖೆಗಳಿಗೆ) | | ೬೦ ಉದ್ಯೋಗಿಗಳು –ಒಟ್ಟು ಕೂಲಿ ರೂ. ೮–೯ ಪ್ರತಿ ತಿಂಗಳಿಗೆ |
| ೧೯೩೩–೩೪ | ೨೨,೫೫೫ ಟಛ | ೬೨,೮೫೭ ಗಜ | ರೂ. ೨೬,೯೪೫ | | |
| ೧೯೩೪–೩೫ ತೆರಕಣಾಂಬಿ ಕೇಂದ್ರ ಬದನವಾಳು ಕೇಂದ್ರದೊಂದಿಗೆ ವಿಲೀನಗೊಂಡಿತು | ೨೩,೩೦೮ ಟಛ | ೬೮,೦೧೫ ಗಜ | ರೂ. ೪೫,೩೦೬ | | ೨೬೦೦ ನೂಲುಗಾರರು ೧೨೦ ನೇಯ್ಗೆಗಾರಿದ್ದರು. ರೂ. ೧೪,೮೮೮ ನೂಲುಗಾರರಿಗೆ ಹಾಗೂ ರೂ. ೮,೧೬೮ ನೇಕಾರರ ಒಟ್ಟು ಸಂಬಳ |
| ೧೯೩೫–೩೬ | ೩೨,೭೪೦ ಟಛ | ೯೭,೩೪೧ ಗಜ | ರೂ. ೪೬,೨೪೩ | | ೨೬೦೦ ನೂಲುಗಾರರು ೧೩೦ |

| | | | | | |
|---|---|---|---|---|---|
| | | | | | ನೇಕಾರರು ರೂ. ೧೪,೪೫೧ ನೂಲುಗಾರರು ರೂ. ೧೧,೦೩೦ ನೇಕಾರರ ಒಟ್ಟು ಸಂಬಳ |
| ೧೯೩೭–೩೮ | | | ರೂ. ೬೫,೦೦೦ | | ೨೮೦೦ ನೂಲುಗಾರರು ೧೪೦ ನೇಕಾರರು |
| ೧೯೩೮–೩೯ | | ೧,೮೩,೦೦೦ ಗಜ ಬಟ್ಟೆ | ರೂ. ೧,೨೦,೦೦೦ ಖರೀದಿ | | ೮೦೦೦ ನೂಲುಗಾರರು ೪೫೦ ನೇಕಾರರು ೧೦೦ ಇತರೆ ಕುಶಲಕರ್ಮಿಗಳು |
| ೧೯೩೯–೪೦ | | ೧,೧೭,೪೩೬ ಗಜ ಬಟ್ಟೆ | ರೂ. ೭೫,೩೨೨ ಖರೀದಿ ಸರ್ಕಾರ ರೂ. ೧೬,೮೫ ಖರೀದಿಸಿತು | | ೪೦೦೦ ನೂಲುಗಾರರು ೧೭೬ ನೇಕಾರರು |

ಖಾದಿ ಉತ್ಪಾದನೆಯಲ್ಲಿ ಆದ್ಯಪ್ರವರ್ತಕ ಕೇಂದ್ರವಾಗಿದ್ದ ಬದನವಾಳು ನಾಗರೀಕರು ಹಾಗೂ ಸರ್ಕಾರಿ ಇಲಾಖೆಗಳ ಖಾದಿ ಬಟ್ಟೆಯ ಬೇಡಿಕೆಗಳನ್ನು ಪೂರೈಸುತ್ತಿತ್ತು. ಉತ್ಪಾದನೆ ಹೆಚ್ಚಿದಂತೆ ಹಲವಾರು ಶಾಖೆಗಳನ್ನು ತೆರೆಯಲಾಯಿತು–ತಿರುವನೂರು, ಮೊಳಕಾಲ್ಮೂರು, ಹೊಳಲ್ಕೆರೆ (ಚಿತ್ರದುರ್ಗ ಜಿಲ್ಲೆ), ಹೊನ್ನಾಳಿ (ಶಿವಮೊಗ್ಗ ಜಿಲ್ಲೆ), ಹೊಸೂರು, ಗುಡಿಬಂಡೆ (ಕೋಲಾರ) ಹಾಗೂ ಸಿಂಧ್‌ಘಟ್ಟಗಳಲ್ಲಿ (ಮಂಡ್ಯ) ಶಾಖೆಗಳ ಆರಂಭವಾಯಿತು. ೧೯೪೪–೪೫ರಲ್ಲಿ ಖಾದಿ ಉತ್ಪಾದನೆ ರೂ. ೧,೬೪,೯೭೨ ಗಳಷ್ಟಾದರೆ ಅದರ ಮಾರಾಟ ರೂ. ೨,೨೮,೧೨೦/–ಗಳಷ್ಟಾಯಿತು. ಖಾದಿ ಮಾರಾಟದಿಂದ ಬಂದ ನಿಚ್ಚಳ ಲಾಭ ರೂ. ೮,೦೦೦/– ಗಳು ಸ್ವಾತಂತ್ರ್ಯಾ ನಂತರ ಖಾದಿ ಉತ್ಪಾದನೆ ಇಳಿಮುಖವಾಗ ತೊಡಗಿತು. ಮುಂಚೂಣಿಯಲ್ಲಿದ್ದ ಬದನವಾಳು ಖಾದಿ ಕೇಂದ್ರ ಹಿಂದೆ ಸರಿಯಲು ಆರಂಭಿಸಿತು. ಇಂದು ಬದನವಾಳು ಖಾದಿ ಕೇಂದ್ರವು ಹೋಳೇನರಸೀಪುರದ ಖಾದಿ ಗ್ರಾಮೋದ್ಯೋಗ – ಸಹಕಾರ



ಸಂಘದ ಸುಪರ್ದಿಗೆ ಸೇರಿದೆ. ಇಂದಿಗೂ ಮಹಿಳೆಯರು ಅದರಲ್ಲೂ ಮಧ್ಯ ವಯಸ್ಕ ಹಾಗೂ ವೃದ್ಧ ಮಹಿಳೆಯರು ಮನೆ ಗೆಲಸ ಮುಗಿಸಿ ಬಂದು ನೂಲು ನೇಯುವ ಕೆಲಸ ಮಾಡುತ್ತಿದ್ದಾರೆ. ೭೦–೮೦ ವರ್ಷದ ಹಿರಿಯ ಮಹಿಳೆಯರು ನೂಲುವ ಕೆಲಸ ಮಾಡುತ್ತಿದ್ದಾರೆ. ಅತ್ಯಂತ ಆಕರ್ಷಕ ಅಭಿವೃದ್ಧಿಯನ್ನು ಸಾಧಿಸಿದ ಬದನವಾಳು ಖಾದಿ ಕೇಂದ್ರ ಇಂದು ಅವನತಿಯ ದಾರಿಯಲ್ಲಿದೆ. ಖಾದಿ ಉತ್ಪನ್ನಗಳಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಇಲ್ಲಿ ನೂಲುವವರಿಗೆ ಹಾಗೂ ನೆಯ್ಗೆ ಕೆಲಸ ಮಾಡುವವರಿಗೆ ಯಾವ ಸೇವಾ ಭದ್ರತೆಯೂ ಇಲ್ಲ. ೨೦೧೫ರಲ್ಲಿ ರಂಗಾಯಣದ ಪ್ರಗತಿಪರ ಚಿಂತಕ ಪ್ರಸನ್ನರವರ ನೇತೃತ್ವದಲ್ಲಿ ಒಂದು ವಾರ ಸುಸ್ಥಿರ ಅಭಿವೃದ್ಧಿ ಸಾಧಿಸಲು ಸತ್ಯಾಗ್ರಹ ನಡೆಸಿದರು. ಇದರಲ್ಲಿ ಅನೇಕ ಪ್ರಗತಿಪರ ಚಿಂತಕರು ಹೋರಾಟಗಾರರು ಪಾಲ್ಗೊಂಡಿದ್ದರು ಬಾಲಿವುಡ್ ಚಿತ್ರನಟ ಇರ್ಫಾನ್ ಖಾನ್ ಪೂರ್ಣ ಬೆಂಬಲ ನೀಡಿದ್ದು ವಿಶೇಷವಾಗಿದೆ. ಖಾದಿ ಗ್ರಾಮೋದ್ಯೋಗ ಹಾಗೂ ಗುಡಿಕೈಗಾರಿಕೆಗಳ ಬಗ್ಗೆ ಜನಜಾಗೃತಿ ಮೂಡಬೇಕೆಂದು ಸಪ್ತಾಹ ನಡೆಸಲಾಯಿತು. ಇಂದಿಗೂ ಖಾದಿ ಗ್ರಾಮೋದ್ಯೋಗದ ಪರವಿರುವ ಯುವ ಚಿಂತಕರು ಖಾದಿ ಗ್ರಾಮೋದ್ಯೋಗಕ್ಕೆ ಪುನಃಶ್ಚೇತನ ಕೊಡುವತ್ತ ಕಾರ್ಯಪ್ರವೃತರಾಗಿದ್ದಾರೆ. ಅದರಲ್ಲಿ ಮೇಲುಕೋಟೆಯ ಜನಪದ ಖಾದಿಯ ಡಾ. ಸುಮನಸ್ ಕೌಲಗಿ ಹಾಗೂ ಅವರ ಸ್ನೇಹಿತರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

ಮಹಾತ್ಮ ಗಾಂಧೀಜಿಯ ಕನಸಿನ ಬದನವಾಳು ಖಾದಿ ಕೇಂದ್ರ ಪುನಶ್ಚೇತನಗೊಂಡು ಹಿಂದಿನಂತೆಯೇ ಗ್ರಾಮೋದ್ಯೋಗದ ಕೇಂದ್ರವಾಗಿ ಪ್ರಮುಖ ಪಾತ್ರ ವಹಿಸಬೇಕೆಂಬುದು ಎಲ್ಲರ ಆಶಯವಾಗಿದೆ.

# ಪರಾಮರ್ಶನ ಗ್ರಂಥಗಳು


೧. Mysore Administrative Reports

೨. ಸಾಧ್ವಿ ಪತ್ರಿಕೆ

೩. ನಂಜನಗೂಡು ತಾಲ್ಲೂಕ್ ಗೆಜೆಟೀಯರ್

೪. Mahatma Gandhi's Campaign against Untouchability in Karnataka – Dr. G. A. Birdar

೫. ತಾತಯ್ಯ ಸ್ಮರಣ ಸಂಚಿಕೆ – ಸಂ. ಎಂ. ಎನ್. ಜೋಯಿಸ್

೬. ಕರ್ಮಯೋಗಿ – ತಗಡೂರು ರಾಮಚಂದ್ರರಾವ್ ಅಭಿನಂದನ ಗ್ರಂಥ – ಸಂ.ಎಂ.ಎನ್. ಜೋಯಿಸ್

೭. ಸ್ವಾತಂತ್ರ್ಯದೆಡೆಗೆ – ಎಂ.ಎನ್. ಜೋಯಿಸ್ ಅಭಿನಂದನ ಗ್ರಂಥ– ಸಂ. ಪ್ರೇಮಲತಾ ಸುಂದರೇಶನ್

೮. ಗಾಂಧೀ ಚಿಂತನ – ಬಿ.ಆರ್.ಪಿ. ಸದ್ಭಾವನಾ ಗ್ರಂಥ

೯. ಸ್ವಾತಂತ್ರ್ಯ ಸಂಗ್ರಾಮದ ಮಹಾಭಾರತ – ಮೂಲ: ಗ.ಪ್ರ. ಪ್ರಧಾನ ಅನು: ಸರಸ್ವತೀ ರಿಸಬೂಡ

೧೦. ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು – ಸಂ.ಎಸ್.ಆರ್. ರಾಮಸ್ವಾಮಿ

೧೧. ಗಾಂಧೀ ಮತ್ತು ಕರ್ನಾಟಕ – ಸಂ. ಸಿದ್ಧವನಹಳ್ಳಿ ಕೃಷ್ಣಶರ್ಮ

೧೨. ಮಹಾತ್ಮಾಗಾಂಧಿ – ನನ್ನ ತಾತ – ಮೂಲ: ಸುಮಿತ್ರಾ ಗಾಂಧಿ ಕುಲಕರ್ಣಿ ಅನು: ಪ್ರೊ. ಬಿ.ವೈ. ಲಲಿತಾಂಬ.


## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಯ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ನೆಹರು ಮೈದಾನ | ಡಾ. ವಸಂತ ಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಸತೀಶ ಕೆ. | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |